**H.R.C** 2/2025

**ಪಿ.ಡಬ್ಲ್ಯೂ-1**

**ದಿಃ 17–11–2025 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಪಾಟೀ ಸವಾಲು: ಎದುರುದಾರರ ಪರ ಶ್ರೀ SGG ವಕೀಲರಿಂದ**

ನಾನು ಶಿಕ್ಷಕಿಯಾಗಿ ಬೆಳಗಾವಿಯ ವನಿತಾ ವಿದ್ಯಾಲಯದಲ್ಲಿ ಸೇವೆ ಸಲ್ಲಿಸುತ್ತಿರುತ್ತೇನೆ. ಸದರಿ ಸಂಸ್ಥೆಯಿಂದ ನಾನು 2007–2008 ಇಸ್ವಿಯ ಸುಮಾರಿಗೆ ನಿವೃತ್ತರಾಗಿರುತ್ತೇನೆ. ಆಗ ನನ್ನ ವಯಸ್ಸು 58 ವರ್ಷ ಆಗಿತ್ತು. ನಾನು ಸೇವೆಯಿಂದ ನಿವೃತ್ತರಾದ ನಂತರ ನಾನು ನನ್ನ ಗಂಡನೊಂದಿಗೆ ನಮ್ಮ ಮನೆಯಲ್ಲಿ ವಾಸವಾಗಿದ್ದೆ. ನನ್ನ ಗಂಡ ಸುಮಾರು 13 ವರ್ಷಗಳ ಹಿಂದೆ ಮೃತರಾಗಿರುತ್ತಾರೆ. ತದನಂತರ ನಾನು ನನ್ನ ಮನೆಯಲ್ಲಿ ಒಬ್ಬಳೇ ವಾಸವಾಗಿರುತ್ತೇನೆ ಎಂದರೆ ಸರಿ. ನನಗೆ ಒಬ್ಬಳೇ ಮಗಳಿದ್ದು, ಸದರಿಯವರಿಗೆ ಈಗ ಮದುವೆಯಾಗಿರುತ್ತದೆ ಎಂದರೆ ಸರಿ. ನನ್ನ ಮಗಳು ಪಾಂಡಿಚೇರಿಯಲ್ಲಿ ವಾಸವಿರುತ್ತಾರೆ. ನನಗೆ ಒಬ್ಬಳು ಅಕ್ಕ ಹಾಗೂ ತಂಗಿ ಇದ್ದು, ಒಬ್ಬ ತಮ್ಮ ಇರುತ್ತಾರೆ. ನನ್ನ ಅಕ್ಕ, ತಂಗಿ ಹಾಗೂ ತಮ್ಮ ರವರಿಗೂ ಮದುವೆಯಾಗಿರುತ್ತದೆ. ನನ್ನ ಅಕ್ಕ ಮೈಸೂರಿನಲ್ಲಿ ವಾಸವಾಗಿದ್ದು, ತಂಗಿ ಕುಡಚಿಯಲ್ಲಿ ವಾಸವಿರುತ್ತಾರೆ, ನನ್ನ ತಮ್ಮ ಬಿಳಗಿಯಲ್ಲಿ ವಾಸವಿರುತ್ತಾರೆ.

2. ಈ ಅರ್ಜಿಯಲ್ಲಿ ಉಲ್ಲೇಖಿಸಿದ ಆಸ್ತಿಯು ಕಂಟೋನ್ಮೆಂಟ್ ಪ್ರದೇಶದಲ್ಲಿ ಇದ್ದು, ಅದು ನನ್ನ ತಾಯಿಗೆ ಸೇರಿರುತ್ತದೆ ಎಂದರೆ ಸರಿ. ನನ್ನ ತಾಯಿ ತೀರಿಕೊಂಡ ನಂತರ ನಮ್ಮ ಮಕ್ಕಳ ಹೆಸರುಗಳನ್ನು ಜಿ ಎಲ್ ಆರ್ ರಜಿಸ್ಟರನಲ್ಲಿ ನಮೂದಿಸಲಗಿರುತ್ತದೆ ಎಂದರೆ ಸರಿ. ನನ್ನ ಅಕ್ಕ, ತಂಗಿ ಹಾಗೂ ತಮ್ಮ, ಊರಿನಿಂದ ಹೊರಗೆ ವಾಸವಿರುತ್ತಾರೆ ಎಂದರೆ ಸರಿ. ಸದರಿ ಆಸ್ತಿಯು ಮನೆ ನಂ.96 ರ ಭಾಗ ಆಗಿರುತ್ತದೆ ಎಂದರೆ ಸರಿ. ಸದರಿ ಮನೆ ನಂ.96 ರಲ್ಲಿ ಒಟ್ಟು ಆರು ಕೋಣೆಗಳು. ನಾನು ಸದರಿ ಮನೆ ನಂ.96 ರ ಸ್ವಾಧೀನದಲ್ಲಿ ಇರುತ್ತೇನೆ

ಎಂದರೆ ಸಾಕ್ಷಿಯು ನಾನು ಸದರಿ ಮನೆಯ ಒಂದು ಭಾಗದಲ್ಲಿ ಅಷ್ಟೇ ಇರುತ್ತೇನೆ ಎಂದು ನುಡಿಯುತ್ತಾರೆ. ನಾನು ಈ ಅರ್ಜಿಯನ್ನು ದಾಖಲಿಸಿದಾಗ ಆ ರೀತಿಯಲ್ಲಿ ಮನೆ ನಂ.96 ರ ಒಂದು ಭಾಗದಲ್ಲಿ ವಾಸವಿರುವ ಬಗ್ಗೆ ನನ್ನ ವಕೀಲರಿಗೆ ಮಾಹಿತಿಯನ್ನು ನೀಡಿರುವುದಿಲ್ಲ. ನಾನು ಸದರಿ ಭಾಗದಲ್ಲಿ ನನ್ನ ಅನುಕೂಲಕ್ಕೆ ತಕ್ಕಂತೆ ವಾಸವಿರುತ್ತೇನೆ ಎಂದರೆ ಸಾಕ್ಷಿಯು ನಾನು ನನಗೆ ಸೇರಿದ ಭಾಗದಲ್ಲಿ ವಾಸವಿರುತ್ತೇನೆ ಎಂದು ನುಡಿಯುತ್ತಾರೆ. ನನ್ನ ಹಾಗೂ ನನ್ನ ಅಕ್ಕ, ತಂಗಿ ಹಾಗೂ ತಮ್ಮನ ನಡುವೆ ಆ ರೀತಿಯಾಗಿ ಯಾವುದೇ ವಿಭಾಗ ಆಗಿರುವುದಿಲ್ಲ ಎಂದರೆ ಸಾಕ್ಷಿಯು ನಾವು ಪರಸ್ಪರ ಹೊಂದಾಣಿಕೆ ಮಾಡಿಕೊಂಡು ಇರುತ್ತೇವೆ ಎಂದು ನುಡಿಯುತ್ತಾರೆ. ನನಗೆ ಮತ್ತು ಅವರ ಸಂಬಂಧ ಚೆನ್ನಾಗಿರುತ್ತದೆ ಎಂದರೆ ಸರಿ. ಆದಕಾರಣ ಸದರಿಯವರು ನನಗೆ ಸೇರಿದ ಭಾಗದಲ್ಲಿ ಇರಲು ನನಗೆ ತಕರಾರು ಮಾಡಿರಲಿಕ್ಕಿಲ್ಲ ಎಂದರೆ ಸರಿ. ಮನೆ ನಂ.96 ಕ್ಕೆ ಸಂಬಂಧಿಸಿದಂತೆ ತೆರಿಗೆಯನ್ನು ನಾನೇ ಕಂಟೋನ್ಮೆಂಟಿಗೆ ಕಟ್ಟುತ್ತಿದ್ದೇನೆ ಎಂದರೆ ಸರಿ.

3. ನಾನು ಮನೆ ನಂ.96 ರಲ್ಲಿ ಎದುರುದಾರರಿಗೆ 10X11 ಭಾಗವು ಬಾಡಿಗೆ ಕೊಟ್ಟಿರುತ್ತೇನೆ. ಸದರಿ ಮನೆಯು ಬೀಳುವ ಸ್ಥಿತಿಯಲ್ಲಿ ಇತ್ತು ಎಂದರೆ ಸರಿಯಲ್ಲ. ಫೆಬ್ರುವರಿ 2024 ರಲ್ಲಿ ಸದರಿ ಮನೆಗೆ ವಿಧ್ಯುತ್ ಮೀಟರನ್ನು ಅಳವಡಿಸಲಾಗಿತ್ತು ಎಂದರೆ ಸರಿ. ಸದರಿ ಮನೆಯನ್ನು ಬಾಡಿಗೆಗೆ ಕೊಡುವ ಸಮಯದಲ್ಲಿ ಮನೆಯ ಪರಿಸ್ಥಿತಿ ಹೇಗಿತ್ತು ಎಂದು ನನಗೆ ಗೊತ್ತಿರಲಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ನನಗೆ ಸೇರಿದ ವಸ್ತುಗಳು ಸದರಿ ಮನೆಯಲ್ಲಿ ಇದ್ದವು ಎಂದು ನುಡಿಯುತ್ತಾರೆ. ನಾನು ನನಗೆ ಬೇಡವಾದ ವಸ್ತುಗಳನ್ನು ಅದರಲ್ಲಿ ಇಟ್ಟಿದ್ದು, ಅದನ್ನು ನಾನು ಉಪಯೋಗಿಸುತ್ತಿರಲಿಲ್ಲ ಎಂದರೆ ಸರಿಯಲ್ಲ. ಅರ್ಜಿಯಲ್ಲಿ ಹೇಳಿರುವ ಆಸ್ತಿಗೆ ವಿಧ್ಯುತ್ ಮೀಟರನ್ನು ಎದುರುದಾರರು ಫೆಬ್ರುವರಿ 2024 ರಲ್ಲಿ ಅಳವಡಿಸಿದ್ದರು ಎಂದರೆ ಸಾಕ್ಷಿಯು ಹೌದು, ಹಳೆ ಮೀಟರವನ್ನು ಬದಲಾಯಿಸಬೇಕು ಎಂದು ಹೆಸ್ಕಾಂ ರವರು ಆದೇಶಿಸಿದ್ದರಿಂದ ಹಾಗೂ ಎದುರುದಾರರು

ಅದನ್ನು ಬದಲಾಯಿಸಿ ಕೊಡಲು ಕೇಳಿದ್ದರಿಂದ, ನಾನು ಒಪ್ಪಿದ್ದು, ಅದಕ್ಕೆ ನಾನು ಹಣ ಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ. ಎದುರುದಾರರೇ ಸದರಿ ಅರ್ಜಿಯ ಆಸ್ತಿಗೆ ವಿದ್ಯುತ್ ಸಂಪರ್ಕವನ್ನು ಹಾಕಿಸುವ ಖರ್ಚನ್ನು ಭರಿಸಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನಾನು ಖರ್ಚು ಮಾಡಿರುವ ಬಗ್ಗೆ ನನ್ನ ಬಳಿ ರಶೀದಿಗಳು ಇರುತ್ತವೆ ಎಂದು ನುಡಿಯುತ್ತಾರೆ. ಅರ್ಜಿಯ ಆಸ್ತಿಯನ್ನು ಬಾಡಿಗೆಗೆ ಕೊಡುವ ಸಮಯದಲ್ಲಿ ಅದರಲ್ಲಿ ಯಾವ ಸವಲತ್ತುಗಳು ಇತ್ತು ಎಂಬುದರ ಬಗ್ಗೆ ನನ್ನ ಬಳಿ ಯಾವುದೇ ದಾಖಲೆಗಳು ಇರುವುದಿಲ್ಲ ಎಂದರೆ ಸರಿ. ನಾನು ನನ್ನ ಪ್ರಮಾಣ ಪತ್ರದ 6ನೇ ಪ್ಯಾರಾದಲ್ಲಿ ಎದುರುದಾರರು ತಮ್ಮ ಖರ್ಚಿನಲ್ಲಿ ಸದರಿ ಆಸ್ತಿಯಲ್ಲಿ ಹೆಚ್ಚಿನ ಹಣವನ್ನು ಹಾಕಿ ಅದನ್ನು ನನ್ನ ಅನುಮತಿ ಇಲ್ಲದೇ ನವೀಕರಿಸಿರುತ್ತಾರೆ ಎಂದು ಹೇಳಿರುತ್ತೇನೆ ಎಂದರೆ ಸರಿ. ಸದರಿ ನವೀಕರಣ ಕೆಲಸವು ಪೂರ್ಣಗೊಳ್ಳಲು ಸುಮಾರು ದಿನಗಳು ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಕೆಲಸದ ಬಗ್ಗೆ ನನಗೆ ಮಳೆಗಾಲ ಶುರುವಾದ ಜೂನ್ 2024 ರಲ್ಲಿ ತಿಳಿದುಬಂದಿರುತ್ತದೆ. ತಕ್ಷಣ ನಾನು ಆ ಬಗ್ಗೆ ಎದುರುದಾರರಿಗೆ ಯಾವುದೇ ನೋಟೀಸನ್ನು ನೀಡಿರುವುದಿಲ್ಲ ಎಂದರೆ ಸರಿ. ನವೀಕರಣದ ಖರ್ಚನ್ನು ಎದುರುದಾರರೇ ಭರಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಾನು ಸದರಿ ನವೀಕರಣದ ಕೆಲಸಕ್ಕೆ ಯಾವುದೇ ಹಣವನ್ನು ಕೊಟ್ಟಿರುವುದಿಲ್ಲ ಎಂದರೆ ಸಾಕ್ಷಿಯು ನನಗೆ ಅದರ ಬಗ್ಗೆ ಗೊತ್ತಿರಲಿಲ್ಲ ಎಂದು ನುಡಿಯುತ್ತಾರೆ. ಎದುರುದಾರರು ನನ್ನ ಅನುಮತಿ ಇಲ್ಲದೇ ಅರ್ಜಿಯ ಆಸ್ತಿಯಲ್ಲಿ ನವೀಕರಣದ ಕೆಲಸವನ್ನು ಮಾಡಿರುವ ಬಗ್ಗೆ, ಸದರಿಯವರಿಗೆ ನೋಟೀಸು ನೀಡಲು ನನಗೆ ಯಾವುದೇ ತೊಂದರೆ ಇರಲಿಲ್ಲ ಎಂದರೆ ಸಾಕ್ಷಿಯು ನನಗೆ ಅದರ ಬಗ್ಗೆ ಗೊತ್ತಿರಲಿಲ್ಲ ಎಂದು ನುಡಿಯುತ್ತಾರೆ.

H.R.C 2/2025

ಪಿ.ಡಬ್ಲ್ಯೂ-1

ಈ ಹಂತದಲ್ಲಿ ಮುಂದುವರೆದ ಸಾಕ್ಷಿಯ ಪಾಟೀ ಸವಾಲಿಗೆ ಸಮಯವಕಾಶ ಕೋರಿದ್ದು ನೀಡಲಾಯಿತು.

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ ಸರಿ ಇದೆ.

Sd/-

3ನೇ ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಧೀಶರು,

ಬೆಳಗಾವಿ.